SRI MANIK RAO:— Sir, this question pertains to reservation. That information I do not have with me.

ಶ್ರೀ ಎಸ್. ಎಸ್. ಅರಕೇರಿ.—ರಿಕ್ರೂಟ್‌ಮೆಂಟಿನಲ್ಲಿ ರಿಸರ್ವೇಷನ್ ಇರುವುದಿಲ್ಲ ಎನ್ನುವುದಕ್ಕೆ ಕಾರಣವೇನು ಎಂಬುದನ್ನು ಹೇಳಲಿಲ್ಲ ಅದಕ್ಕೆ ಏನು ಕಾರಣ ರೆಕ್ರೂಟಮೆಂಟ್ ಕಮಿಟಿಗಳಲ್ಲಿ ಹರಿಜನರ ಪ್ರಾತಿನಿಧ್ಯವಿಲ್ಲ ಎನ್ನುವುದಕ್ಕೆ ಸರಿಯಾದ ಉತ್ತರವಿಲ್ಲ ಮೈಸೂರು ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಸಬ್ ಇನ್‌ಸ್ಪೆಕ್ಟರ್ ಮತ್ತು ಪೋಲೀಸ್ ಇನ್‌ಸ್ಪೆಕ್ಟರ್‌ಗಳ ನೇಮಕಾತಿಯನ್ನು ವರ್ಗಾಯಿಸಲು ಏನು ತೊಂದರೆ ಇದೆ ಎಂದು ಕೇಳಿದ್ದಕ್ಕೂ ಉತ್ತರ ಬರಲಿಲ್ಲ. ಅದನ್ನೆಲ್ಲ ಹೇಳುತ್ತಾರೆಯೇ

SRI MANIK RAO:—So far as the present policy of the Government is concerned, reservation is only restricted with regard to direct recruitment. so far as the Hon. Members suggestion for reservation of quota even for promotional posts is concerned it is a policy matter. It requires thorough examination and so far, Government has not taken any decision. It is therefore difficult for me to say anything at this juncture.

With regard to entrusting recruitment to Public Service Commission I must say that this Department has some peculiar nature of duties to perform and it has to function in a peculiar way. Naturally it requires some suitable candidates according to the requirements of the Department. Therefore, it is not advisable to entrust the selection to the Public Service Commission.

MILK MARKETING BY BANGALORE DAIRY

495. SRI G. RAME GOWDA :—(Doddaballapur)—Will the Minister of State for Veterinary Services, Animal Husbandry and Dairy Development be pleased to state:—

(*a*) the milk marketing capacity of Bangalore Dairy during each year since 1967;

(*b*) the loss incurred during each year since 1967;

(*c*) whether a quota has been fixed to individuals and also to societies in respect of supply of milk, if so, reasons for the same;

(*d*) the basis for fixing the milk supply quota and the conditions for the supply;

(*e*) whether there is Dairy Supervision over the production and collection of milk;

(*f*) the steps taken to prevent adulteration of milk and supply of powder milk ?

SRI G. B. SHANKARA RAO :—(Minister of State for Veterinary Services, Animal Husbandry and Dairy Development).

(SRI G. B. SHANKARA RAO)

(*a*) The milk marketing capacity for sale of whole milk was up to 23,400 litres per day in 1967. 25,100 litres per day in 1968 and this capacity is constant in 1969 at 25,000 litres.

(*b*) The net loss incurred was Rs. 9,50,989.32 P. in 1966-67 and Rs. 40,99,587.62 P. in 1967-68' the Balance Sheet for 1968-69, in under audit.

(*c*) Yes, Quotas have fixed with effect from the second fortnight of December 1969 up to February 1970 so that the intake of milk may not unduly exceed the marketing capacity of the Dairy to sell the milk.

(*d*) Quotas have been fixed after considering the quantity of milk delivered by each producer up to end of November 1969.

(*e*) Yes.

(*f*) Quality control tests are being enforced to detect likely adulteration of milk by Errant producers.

ಶ್ರೀ ಜಿ. ರಾಮೇಗೌಡ :—ಡೈರಿಗೆ ಹೆಚ್ಚಿನ ಹಾಲು ಮಾರಾಟ ಮಾಡುವುದಕ್ಕೆ ಶಕ್ತಿ ಇಲ್ಲ ಎಂದು ಕೋಟಾ ನಿಗದಿ ಮಾಡಿರುವುದಾಗಿ ಹೇಳಿದ್ದಾರೆ, ಬಡ ರೈತರು ಕೋಟಾ ನಿಗದಿ ಮಾಡಿರುವು ದಕ್ಕಿಂತ ಹೆಚ್ಚಿಗೆ ಹಾಲನ್ನು ಕೊಟ್ಟರೆ ಏನು ಬೆಲೆ ಕೊಡಲಾಗುತ್ತದೆ ? ಆ ಬೆಲೆ ಕೊಡುವುದಕ್ಕೆ ಆಧಾರವೇನು ?

ಶ್ರೀ ಜಿ. ಬಿ. ಶಂಕರ ರಾವ್:—ಕೋಟಾ ಫೆಬ್ರುವರಿ ಕೊನೆಯವರೆಗೆ ನಿಗದಿ ಮಾಡಲಾಗಿತ್ತು. ಈಪಾಗ ಮಾರ್ಚಿ ಒಂದನೇ ತಾರೀಖಿನಿಂದ ಕೋಟಾ ಸಿಸ್ಟಂ ತೆಗೆದಿದ್ದೇವೆ ಮತ್ತು ಬೇಕಾದಷ್ಟು ಹಾಲು ಕೊಡುವಂತೆ ಹೇಳಿದ್ದೇವೆ.

ಶ್ರೀ ಜಿ. ರಾಮೇ ಗೌಡ :—ಕೋಟಾ ನಿಗದಿ ಮಾಡಿರುವುದಕ್ಕಿಂತ ಹೆಚ್ಚಾಗಿ ಹಾಲನ್ನು ತಂದುಕೊಟ್ಟರೆ ಹೆಚ್ಚಿನ ಹಾಲಿಗೆ ಏನು ಬೆಲೆ ಕೊಡಲಾಗುತ್ತದೆ ಆ ಬೆಲೆ ಗೊತ್ತು ಮಾಡುವುದಕ್ಕೆ ಏನು ಆಧಾರವನ್ನು ಇಟ್ಟುಕೊಂಡಿದ್ದಾರೆ ?

ಶ್ರೀ ಜಿ. ಬಿ. ಶಂಕರ ರಾವ್ :—ಕೋಟಾ ನಿಗದಿ ಮಾಡುವ ಪ್ರಶ್ನೆ ಇಲ್ಲ. ಬೇಕಾದಷ್ಟು ಹಾಲು ತಂದುಕೊಡಬಹುದು ಎಂದು ಹೇಳಿದ್ದೇವೆ At the usual rate, they can supply milk to the Dairy. The Dairy will give the price at the rate fixed previously.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ :—ಡೈರಿಗೆ ನಷ್ಟವಾಗಿರತಕ್ಕುದು ೫೦,೫೦,೨೬೯ ರೂಪಾಯಿ (ಎಂದು ಒಪ್ಪಿಕೊಂಡಿದ್ದಾರೆ. ಈ ನಷ್ಟವಾಗುವುದಕ್ಕೆ ಕಾರಣವೇನು? ನಷ್ಟ ಮಾಡಿರುವವರು ಯಾರು ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜಿ. ಬಿ. ಶಂಕರ ರಾವ್. ನಷ್ಟ ೫೦ ಲಕ್ಷವಲ್ಲ. ನಿಖರವಾದ ನಷ್ಟ ವೆಷ್ಟು ಏಂದು (ಬ) ಭಾಗಕ್ಕೆ ಉತ್ತರವಾಗಿ ಕೊಡಲಾಗಿದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ .—ಎರಡು ವರ್ಷಗಳಲ್ಲಿ ಒಟ್ಟು ೫೦ ಲಕ್ಷ ರೂಪಾಯಿ ನಷ್ಟವಾಗಿದೆ. ಈ ನಷ್ಟ ಏತಕ್ಕೋಸ್ಕರ ಆಯಿತು ಇಷ್ಟು ನಷ್ಟವಾಗುವವರೆಗೆ ಸಂಬಂಧಪಟ್ಟ ಅಧಿಕಾರಿಗಳು ಏನು ಮಾಡುತ್ತಿದ್ದರು ನಷ್ಟವಾಗಿರತಕ್ಕುದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಜಿ. ಬಿ. ಶಂಕರ ರಾವ್:—ನಷ್ಟವಾಗಿರುವುದಕ್ಕೆ ಕಾರಣಗಳು ಹಲವು. ೧೯೬೭-೬೮ರಲ್ಲಿ ಮಾರಾಟ ಮಾಡುವುದಕಿಂತ ಹೆಚ್ಚಿನ ಬೆಲೆಯಲ್ಲಿ ಹಾಲನ್ನು ಖರೀದಿ ಮಾಡಿದ್ದರಿಂದ ಮತ್ತು ಹೆಚ್ಚುವರಿ ಹಾಲನ್ನು ಬೆಣ್ಣೆ ಮತ್ತು ಇತರ ಪದಾರ್ಥಗಳಾಗಿ ಪರಿವರ್ತನೆ ಮಾಡಿದ್ದರಿಂದ ಸುಮಾರು ೧೬ ಲಕ್ಷ ರೂಪಾಯಿ ನಷ್ಟವಾಯಿತು. ಬಂಡವಾಳದ ಮೇಲಿನ ಬಡ್ಡಿಗಾಗಿ ೧೦,೦೪,೨೩೬ ರೂಪಾಯಿ, ಡಿಪ್ರಿಸಿಯೇಷನ್‌ನಲ್ಲಿ ೮,೫೫,೭೦೮-೬೬ ಹೀಗೆ ೧೮,೬೦, ೮೪೪-೭೧ ರೂಪಾಯಿ ನಷ್ಟವಾಗುತ್ತದೆ. ಹೀಗೆ ನಷ್ಟವಾಗುವುದಕ್ಕೆ ಕಾರಣವೇನು ಎನ್ನುವುದನ್ನು ಕಾಣಬಹುದು. ಅಧಿಕಾರಿಗಳು ನಿರ್ವಹಿಸುವ ಕೆಲಸದಲ್ಲಿ ಅದಕ್ಷತೆ ಏನೂ ಇಲ್ಲ. ಡೈರಿಯಲ್ಲಿ ನಷ್ಟವಾಗುವುಕ್ಕೆ ಕಾರಣಗಳೇನ್ನು ಎನ್ನುವುದನ್ನು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ:—ಸ್ವಾಮಿ, ೧೯೬೬-೬೭ರಲ್ಲಿ ೯,೫೦,೯೯೮ರೂ. ನಷ್ಟವಾಗಿದೆ, ೧೯೬೭-೬೮ರಲ್ಲಿ ೪೨,೯೯,೫೮೭ರೂ. ನಷ್ಟವಾಗಿದೆ, ಹಾಗೂ ೧೯೬೮-೬೯ರ ಜಮಾ ಖರ್ಚು ಲೆಕ್ಕ ನಡೆಯುತ್ತಿದೆ ಎಂದು ತಿಳಿಸಿದ್ದಾರೆ. ಹಾಗಾದರೆ ಈ ಡೈರಿ ನಷ್ಟದಿಂದಲೇ ಪ್ರಾರಂಭವಾಯಿತು ಎಂದು ಅರ್ಥವಾಯಿತು. ಇದರಲ್ಲಿ ಹಾಲು ಕೊಂಡು ಮಾರುವುದರಲ್ಲಿ ಎಷ್ಟು ನಷ್ಟವಾಗಿದೆ, ಬೆಣ್ಣೆ ಮಾರುವ ವಿಧಾನದಲ್ಲಿ ಎಷ್ಟು ಲಾಭವಾಯಿತು, ಹಾಗೂ ಸಂಬಂಧಪಟ್ಟ ಅಧಿಕಾರಿಗಳ ತನಿಖೆ ಏನಾನಜೆಯುತ್ತಿದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಜಿ. ಬಿ. ಶಂಕರರಾವ್:—ಒಮ್ಮೆಲೇ ಎಲ್ಲ ಪ್ರಶ್ನೆ ಕೇಳಿದರೆ ಉತ್ತರ ಹೇಳುವುದು ಕಷ್ಟ. ಒಂದೊಂದೇ ಪ್ರಶ್ನೆ ಕೇಳಿದರೆ ಉತ್ತರ ಹೇಳಬಹುದು. ಮಾನ್ಯ ಸದಸ್ಯರು ಡೈರಿ ನಷ್ಟದಿಂದ ಪ್ರಾರಂಭವಾಯಿತು ಎಂದು ಹೇಳುತ್ತಾರೆ. ಆಡಿಟ್ ಲೆಕ್ಕ ಇಡುವ ಪದ್ಧತಿ ಹಾಗೆ ಇದೆ. ಹಣ ಹಾಕಿರುವುದರ ಮೇಲೆ ಇಂಟರೆಸ್ಟ್ ಕ್ಯಾಲ್ಕುಲೇಟ್ ಮಾಡಬೇಕಾಗುತ್ತದೆ. ಡಿಪ್ರಿಷಿಯೇಷನ್ ಲೆಕ್ಕ ಹಾಕುತ್ತಾರೆ. ಆದ್ದರಿಂದ ಸುಮಾರು ೧೮ ಲಕ್ಷ ರೂಪಾಯಿ ನಷ್ಟ ಆಗಿದೆ ಎಂದು ಕಾಣುತ್ತದೆ. ೧೯೬೭-೬೮ ಆಡಿಟ್ ಆದ ವಿಚಾರ ಹೇಳುತ್ತೇನೆ. ೧೮,೬೦,೦೪೪ ರೂಪಾಯಿ ನಷ್ಟವಾಗಿದೆ. ಇದರಲ್ಲಿ ಸಂಬಳ ಸಾರಿಗೆಗೆ ೮,೧೩,೧೫೬ ರೂಪಾಯಿ ಖರ್ಚಾಗಿದೆ.

ಶ್ರೀ ಎಚ್. ಬಿ. ಜ್ವಾಲನಯ್ಯ:—ಇದರಲ್ಲಿ ಮಿಲ್ಕ್ ಮಾರ್ಕೆಟಿಂಗ್ ಕ್ಯಾಪಾಸಿಟಿ ಎಷ್ಟು ? ಟೋಟಲ್ ಕ್ಯಾಪಿಟಲ್ ಔಟಲೇ ಎಷ್ಟು?

ಶ್ರೀ ಜಿ. ಬಿ. ಶಂಕರರಾವ್:—ನೋಟೀಸ್ ಬೇಕು.

ಶ್ರೀ ಎಸ್. ವಿ. ಅಗ್ನಿಹೋತ್ರಿ:—ಇಷ್ಟು ಹಾನಿಯಾದರೂ ಜನತೆಗೆ ಉತ್ತಮ ಹಾಲು ಕೊಡುವ ಉದ್ದೇಶ ಸರ್ಕಾರಕ್ಕೆ ಇದ್ದದ್ದು ನಿಜವೇ?

ಶ್ರೀ ಜಿ. ಬಿ. ಶಂಕರರಾವ್:—ಡೈರಿ ಪ್ರಾರಂಭ ಮಾಡಿದ ಉದ್ದೇಶ ಒಳ್ಳೆ ಹಾಲು, ಆರೋಗ್ಯಕರವಾದ ಹಾಲು ಜನತೆಗೆ ಕೊಡಬೇಕು ಎಂದು ಪ್ರಾರಂಭ ಮಾಡಿದೆ.

ಶ್ರೀ ಬಿ. ಪಿ. ಗಂಗಾಧರ್: ಲಾಸ್ ಆಗುವುದು ಮೊಟ್ಟ ಮೊದಲು ಯಾವಾಗ ಪ್ರಾರಂಭವಾಯಿತು? ಬರಬರುತ್ತಾ ಅದು ೪೦ ಲಕ್ಷಕ್ಕೆ ಬಂದಿದೆ. ಇದು ಯಾವ ಮಂತ್ರಿಯಿಂದ ಹೆಚ್ಚಾರು ಆಯಿತು? ಯಾವ ಮಂತ್ರಿ ಕಾಲಕ್ಕೆ ಇದು ಮುಗಿಯುತ್ತದೆ?

ಶ್ರೀ ಜಿ. ಬಿ. ಶಂಕರರಾವ್:—ಮಂತ್ರಿಗಳಿಗೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ಎಸ್. ಎಂ. ಗುರಡ್ಡಿ:—ಈ ಹಾಲಿನ ಕೇಂದ್ರಕ್ಕೆ ಕೆಲವು ದೇಶದಿಂದ ಮಿಲ್ಕ್ ಪೌಡರ್ ಗಿಫ್ಟ್ ಆಗಿ ಬಂದಿದೆ. ಅದೂ ಕೂಡ ಈ ಲಾಸಿನಲ್ಲಿ ಸೇರಿದೆಯೇ? ಅವನ್ನೂ ಕೂಡಿಸಿದರೆ ಎಷ್ಟು ಲಾಸ್ ಆಗುತ್ತದೆ?

ಶ್ರೀ ಜಿ. ಬಿ. ಶಂಕರರಾವ್:—ಯುನಿಸೆಫ್‌ನಿಂದ ೩೬ ಲಕ್ಷ ರೂಪಾಯಿ ಕಿಮ್ಮತ್ತಿನ ಮೆಶಿನರಿ ಸಿಕ್ಕಿದೆ. ಅದನ್ನು ದಾನವಾಗಿ ಕೊಟ್ಟಿದೆ. ಇದನ್ನು ನಷ್ಟದಲ್ಲಿ ಸೇರಿಸಲು ಆಗುವುದಿಲ್ಲ.

ಶ್ರೀ ಆಜೀಜ್ ಶೇಟ್:—ಪ್ರೈವೇಟ್ ಲಾರಿಗಳಿಂದ ಹಾಲು ಸಪ್ಲೈ ಮಾಡುವುದಕ್ಕೆ ಹೈ ಮೈಲೇಜ್ ರೇಟು ಎಷ್ಟು ಕೊಟ್ಟಿದ್ದೀರಿ? ಹಾಲು ಕೊಳ್ಳುವ ರೇಟು ಕೆಲವು ಜನರ ವಿಚಾರದಲ್ಲಿ ಹೆಚ್ಚು ಮಾಡಿರುವುದರಿಂದ ನಷ್ಟವಾಗಿದೆಯಲ್ಲವೇ? ಬೆಣ್ಣೆ ಮಾರಾಟವಾಗದೆ ಕೊಳೆಸಿದ್ದು ಎಷ್ಟು ನಷ್ಟವಾಗಿದೆ? ವೆಟೆರಿನರಿ ಡಿಪಾರ್ಟ್‌ಮೆಂಟಿನಲ್ಲಿ ಮಿಲ್ಕ್ ಡೈರಿ ಆಫೀಸರ್ಸ್ ಸರಿಯಾಗಿ ಕೆಲಸ ಮಾಡುತ್ತಿಲ್ಲ ಹಾಗೂ ಎಕ್ಸ್‌ಪರ್ಟ್ಸ್ ಇಲ್ಲಾ, ಇದು ನಷ್ಟವಾಗುವುದಕ್ಕೆ ಕಾರಣ ಇರುವುದು ಇಲ್ಲವೇ?

ಶ್ರೀ ಜಿ. ಬಿ. ಶಂಕರರಾವ್:—ಮಾನ್ಯ ಸದಸ್ಯರು ರೇಟಿನ ವಿಚಾರದಲ್ಲಿ ಜನರಲ್ಲಾಗಿ ಕೇಳುತ್ತಿದ್ದಾರೆ. ಆದರೆ ನಾವು ರೇಟನ್ನು ನಿಗದಿ ಮಾಡಿದ್ದು ಒಂದೇ ಒಂದು ಸಾರೆ ಅದನ್ನು ಮತ್ತೆ ನಾವು ಹೆಚ್ಚು ಕಡಿಮೆ ಮಾಡಿಲ್ಲ.

ಇನ್ನು ಲಾರಿಗಳನ್ನು ಬಾಡಿಗೆಗೆ ತೆಗೆದುಕೊಂಡಿರತಕ್ಕ ವಿಷಯದಲ್ಲಿ ಟೆಂಡರುಗಳನ್ನು ಕರೆದು ಅದರಲ್ಲಿ ಯಾರದು ಲೋಯೆಸ್ಟ್ ಇದ್ದಿತೋ ಅಂಥವರ ಟೆಂಡರನ್ನು ಮಾತ್ರ ನಾವು ಅಂಗೀಕರಿಸಿದ್ದೇವೆ. ಆದ್ದರಿಂದ ನಮಗೇನೂ ನಷ್ಟವಾದಂತೆ ಕಾಣುವುದಿಲ್ಲ.

ಇನ್ನು ನಮ್ಮ ಡೈರಿ ಪಾರಂನಲ್ಲಿ ಎಕ್ಸ್‌ಪರ್ಟುಗಳಿಲ್ಲ ಎಂದು ಹೇಳಿದರು. ಅದು ಸರಿಯಲ್ಲ. ನಮ್ಮಲ್ಲಿ ಸಾಕಷ್ಟು ಎಕ್ಸ್‌ಪರ್ಟ್‌ಗಳಿದ್ದಾರೆ. ಅವರಿಲ್ಲದೆ ನಷ್ಟವಾಗಿದೆ ಎನ್ನುವುದು ಸರಿಯಲ್ಲ.

ಇನ್ನು ೧೯೬೯-೭೦ರ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಬೆಣ್ಣೆಯನು ಸುಟ್ಟ ಬಗ್ಗೆ ಇದೇ ಮಾನ್ಯ ಸಭೆಯಲ್ಲಿ ಅನೇಕಾವರ್ತಿ ಉತ್ತರ ಹೇಳಿದ್ದೇನೆ. ಅದನ್ನು ತನಿಖೆ ಮಾಡುವುದಕ್ಕೆ ಏರ್ಪಾಡನ್ನು ಮಾಡಿದ್ದೇವೆ.

ಶ್ರೀ ಜಿ. ಎನ್. ಪಾಟೀಲ್:—(ಬ)ಗೆ ಉತ್ತರವಾಗಿ ೫೦ ಲಕ್ಷ ರೂಪಾಯಿಗಳು ಲುಕ್ಸಾನಾಗಿದೆ ಎಂದು ತಿಳಿಸಲಾಗಿದೆ. ಇಂಥ ಲುಕ್ಸಾನಾಗತಕ್ಕ ಉದ್ಯಮಗಳನ್ನು ಸರ್ಕಾರದವರು ಕೂಡಲೇ ಕೈ ಬಿಡುವುದು ಯೋಗ್ಯವಲ್ಲವೇ?

ಶ್ರೀ ಜಿ. ಬಿ. ಶಂಕರರಾವ್:—ಆ ಲುಕ್ಸಾನು ಎರಡು ವರ್ಷಗಳ ಹಿಂದಿನದು. ಈಗ ಆ ನಷ್ಟವನ್ನು ಕಡಮೆ ಮಾಡುತ್ತ ಬಂದಿದ್ದೇವೆ. ಆದ್ದರಿಂದ ಆ ಡೈರಿಯನ್ನು ಮುಚ್ಚುವುದಕ್ಕಾಗುವುದಿಲ್ಲ.

SRI C. K. RAJAIAH SETTY:—For the reason assigned by the Minister this loss cannot be avoided even in future. So, is it not necessary to have a thorough examination of this Milk Dairy and see that proper care is taken by the Government to avoid loss?

ಶ್ರೀ ಜಿ. ಬಿ. ಶಂಕರರಾವ್:—ಈಗ ಒಂದು ವರ್ಷದಿಂದ ನಷ್ಟವನ್ನು ಕಡಮೆ ಮಾಡುವುದರಲ್ಲಿ ನಾವು ಯಶಸ್ವಿಯಾಗಿದ್ದೇವೆ. ಆದರೆ ಇದರ ಬಗ್ಗೆ ಹಾಕಿರತಕ್ಕ ಬಂಡವಾಳದ ಮೇಲಿನ ಬಡ್ಡಿಯನ್ನು ಮತ್ತು ಡಿಪ್ರೀಸಿಯೇಷನ್ ಇವುಗಳನ್ನು ಕಡಮೆ ಮಾಡುವುದಕ್ಕಾಗುವುದಿಲ್ಲ. ಇನ್ನು ಮುಂದಕ್ಕೆ ನಷ್ಟ ಆಗದೆ ಇರುವಂತೆ ಡೈರಿಯನ್ನು ನಡೆಸುವುದಕ್ಕೆ ಎಲ್ಲ ಪ್ರಯತ್ನಗಳನ್ನೂ ಮಾಡಲಾಗುತ್ತದೆ.

ಶ್ರೀ ಜಿ. ರಾಮೆಗೌಡ:—ನೀವೇನೋ ಖೋಟಾ ಗೊತ್ತುಮಾಡಿ ನೂರು ಲೀಟರ್ ಹಾಲಿನ ಬೆಲೆಯನ್ನು ಗೊತ್ತು ಮಾಡಿದ್ದೀರಿ. ಆದರೆ ಅದರ ಮೇಲೆ ಹತ್ತು ಲೀಟರನ್ನು ತೆಗೆದುಕೊಳ್ಳತಕ್ಕ ಹಾಲಿನ ಬೆಲೆಯನ್ನು ಯಾರು ನಿಗದಿ ಮಾಡಿದ್ದು? ಏನು ರೇಟನ್ನು ನಿಗದಿ ಮಾಡಲಾಗಿದೆ?

ಶ್ರೀ ಜಿ. ಬಿ. ಶಂಕರರಾವ್:—ನಮ್ಮಲ್ಲಿ ಆ ಖೋಟಾ ಪದ್ಧತಿಯೇ ಇಲ್ಲ. ನಾವು ನೂರು ಲೀಟರಿನ ಬೆಲೆಯನು ಮಾತ್ರ ನಿಗದಿ ಮಾಡಿದ್ದೇವೆ.

ಶ್ರೀ ಜಿ. ರಾಮೇಗೌಡ:—ಇಲ್ಲಿಗೆ ಕಳೆದ ಎರಡು ತಿಂಗಳ ಕೆಳಗೆ ಖೋಟಾ ಪದ್ಧತಿ ಜಾರಿಯಲ್ಲುತ್ತು. ಖೋಟಾ ಹಾಲಿಗೆ ಲೀಟರಿಗೆ ೧೦೨ ಪೈಸೆಗಳನ್ನೂ ಮತ್ತು ಆ ಮೇಲಿನ ಹತ್ತು ಲೀಟರಿಗೆ ೫೦ ಪೈಸೆಗಳೆಂದು ಯಾರು ನಿಗದಿ ಮಾಡಿದವರು? ಅದನ್ನು ಹೇಗೆ ಕೊಡುತ್ತೀರಿ?

ಶ್ರೀ ಜಿ. ಬಿ. ಶಂಕರರಾವ್:—ಆ ಹತ್ತು ಲೀಟರಿನ ವಿಚಾರ ನಮಗೆ ಗೊತ್ತಿಲ್ಲ. ಅದನ್ನು ಯಾರು ಕೊಡುತ್ತಿದ್ದಾರೋ ಅವರಿಗೂ ಮತ್ತು ಸ್ಥಳೀಯ ಅಧಿಕಾರಿಗಳು ಆ ಇಬ್ಬರಿಗೇ ಗೊತ್ತು. ಆದ್ದರಿಂದ ಆ ವಿಚಾರ ಅವರಿಗೇ ಬಿಟ್ಟದ್ದು.

SRI S. SIVAPPA:—The Hon. Minister had assured the House that they were going to hold an enquiry into the misdeeds of the Dairy during the year 1967-68. May I know what is the action taken by the Government on that assurance?

ಶ್ರೀ ಜಿ. ಬಿ. ಶಂಕರರಾವ್:—ಅಲ್ಲಿ ೪೦ ಲಕ್ಷ ರೂಪಾಯಿಗಳ ಅವ್ಯವಹಾರ ನಡೆದಿದೆ ಎಂದು ವಿಚಾರಣೆಯನ್ನು ನಡೆಸುತ್ತಿಲ್ಲ. ಈ ಹಿಂದೆ ಬೆಣ್ಣೆಯನ್ನು ಸುಟ್ಟ ಬಗ್ಗೆ ವಿಚಾರಣೆ ನಡೆಸಬೇಕೆಂದಾಗಿತ್ತು.

SRI S. SIVAPPA:—May I know when has the enquiry made into it and what is the result of that enquiry?

SRI G. B. SHANKAR RAO:—I do not remember the exact date on which enquiry was instituted.

ಶ್ರೀ ಎಸ್. ಎಂ. ಕೃಷ್ಣನ್:—ಈ ಡೈರಿ ಫಾರಂನಲ್ಲಿ ನಷ್ಟವಾಗುತ್ತಿರುವ ಬಗ್ಗೆ ಎಸ್ಟಿಮೇಟ್ಸ್ ಕಮಿಟಿಯವರು ಒಂದು ವರದಿಯನ್ನು ಕೊಟ್ಟು ಅದರಲ್ಲಿ ಕೆಲವು ಸಲಹೆಗಳನ್ನು ನಷ್ಟವನ್ನು ತಗ್ಗಿಸತಕ್ಕ ಬಗ್ಗೆ ಸೂಚನೆಗಳನ್ನು ಮಾಡಿದ್ದಾರೆ. ಮಾನ್ಯ ಸಚಿವರು ಆ ವರದಿಯನ್ನು ಓದಿದ್ದಾರೆಯೇ? ಓದಿದ್ದರೆ ಹೇಗೆ ನಷ್ಟವನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ?

ಶ್ರೀ ಜಿ. ಬಿ. ಶಂಕರರಾವ್:—ಇದಕ್ಕೆ ಒಂದು ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿದರೆ ಉತ್ತರವನ್ನು ಕೊಡಲಾಗುತ್ತದೆ. ಆಲ್ಲದೆ ಸದರಿ ವರದಿಯಲ್ಲಿ ಸೂಚಿಸಿರತಕ್ಕ ಪ್ರಕಾರ ದೇಶದಲ್ಲಿರತಕ್ಕ ಎಕ್ಸ್‌ಪರ್ಟುಗಳನ್ನು ಕರೆಸಿ ಅವರಿಗೆ ವಿಚಾರವನ್ನು ಪರಿಶೀಲಿಸುವುದಕ್ಕೆ ಹೇಳಿದ್ದೇವೆ. ಅವರು ಪರಿಶೀಲನೆ ಮಾಡುತ್ತಿದ್ದಾರೆ. ಪರಿಣಾಮವೇನೆಂಬುದು ನಮ್ಮ ಕೈಗಿನ್ನೂ ಬಂದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಹಾಲಿನ ಕಲಬೆರೆಕೆಯನ್ನು ಕಂಡುಹಿಡಿಯತಕ್ಕ ಬಗ್ಗೆ ಗುಣ ನಿಯಂತ್ರಣ ಪರೀಕ್ಷೆಗಳನ್ನು ಆಚರಣೆಗೆ ತರಲಾಗಿದೆಯೆಂದು ಹೇಳಿದ್ದಾರೆ. ಆದರ ಪ್ರಕಾರ ಎಷ್ಟು ಸಾರ್ತಿ ಪರೀಕ್ಷೆಗಳನ್ನು ಮಾಡಲಾಯಿತು? ಎಷ್ಟು ಜನರಿಗೆ ಶಿಕ್ಷೆಯನ್ನು ಮಾಡಲಾಗಿದೆ?

SRI G. B. SHANKARA RAO:—It is a question which cannot be answered all of a sudden on the floor of the House because it calls for several details for the whole year.

ಶ್ರೀ ಬಿ. ನಂಜಪ್ಪ:—ಬೆಂಗಳೂರು ಜನರಿಗೆ ಒಳ್ಳೆಯ ಹಾಲು ಮತ್ತು ಬೆಣ್ಣೆಯನ್ನು ಒದಗಿಸ ಬೇಕೆಂದಲ್ಲವೇ ಈ ಡೈರಿಫಾರಂನ್ನು ಸ್ಥಾಪಿಸಿದ್ದು?

ಶ್ರೀ ಜಿ. ಬಿ. ಶಂಕರರಾವ್:—ನನಗೆ ಗೊತ್ತಿರುವ ಹಾಗೆ ಒಳ್ಳೆಯ ಹಾಲು ಮತ್ತು ಬೆಣ್ಣೆ ಸರಬರಾಯಿ ಆಗುತ್ತಿದೆಯೆಂದು ತಿಳಿದು ಬಂದಿದೆ.

1-30 P. M.

ಶ್ರೀ ಬಿ. ದೊಡ್ಡಬೋರೇಗೌಡ.—ಬೆಂಗಳೂರು ಡೈರಿಗಾಗಿ ಸರ್ಕಾರದವರಿಂದ ಕೊಟ್ಟಿರುವ ಹಣ ಎಷ್ಟು ? ಮತ್ತು ಇದುವರೆಗೆ ಇದರ ಲೆಕ್ಕ ಪತ್ರಗಳನ್ನು ಆಡಿಟ್ ಮಾಡಿಸಿರುವುದರಲ್ಲಿ ಎಷ್ಟು ಮೊಬಲಗು ನಷ್ಟವಾಗಿದೆ ಎಂದು ತಿಳಿದು ಬಂದಿದೆ. ಇಂತಹ ನಷ್ಟಕ್ಕೆ ಇಲ್ಲಿನ ಅಧಿಕಾರಿಗಳೇ ಜವಾಬುದಾರರು ಆಗಿದ್ದರೆ ಅವರ ಮೇಲೆ ತನಿಖೆ ಮಾಡಿ ತಕ್ಕ ಕಾರ್ಯಕ್ರಮ ಕೈಗೊಂಡಿದ್ದೀರಾ ?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ಕೇಳಿದಂತೆ ಈ ಡೈರಿಯ ಬಗ್ಗೆ ಎಲ್ಲ ವಿವರಗಳೂ ನನ್ನ ಮುಂದೆ ಇಲ್ಲ ಮತ್ತು ಎರಡು ವರ್ಷಗಳಿಂದ ಎಂದರೆ, ೧೯೬೮-೬೯ ಮತ್ತು ೧೯೬೯-೭೦ ಈ ಎರಡು ವರ್ಷಗಳ ಆಡಿಟ್ ರಿಪೋರ್ಟು ಇನ್ನೂ ಬಂದಿಲ್ಲ. ಆದ್ದರಿಂದ ಖಚಿತವಾಗಿ ಎಷ್ಟು ನಷ್ಟವಾಗಿದೆ ಎನ್ನುವುದು ಇನ್ನೂ ಗೊತ್ತಾಗಿಲ್ಲ. ಅಧಿಕಾರಿಗಳ ಮೇಲೆ ತನಿಖೆ ಮಾಡಿದ ಮೇಲೆ ಅವರಿಂದ ಎಷ್ಟು ನಷ್ಟವಾಗಿದೆ ಎಂದು ಮುಂದೆ ಗೊತಾದರೆ ಅಂತಹ ತಪ್ಪು ಮಾಡಿರುವ ಅಧಿಕಾರಿಗಳ ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ನಾನು ಬಂದ ಮೇಲೆ ಇಂಟರ್ನಲ್ ಆಡಿಟ್ ಎಂದು ಮಾಡಿಸಿ ಇದರ ಮೂಲಕ ತನಿಖೆ ಮಾಡಲು ಆರಂಭ ಮಾಡಲಾಗಿದೆ ಇನ್ನು ಆರು ತಿಂಗಳೊಳಗೆ ಇಡೀ ಡೈರಿಯಲ್ಲಿರತಕ್ಕ ಲೋಪದೋಷಗಳೇನು ಎನ್ನುವುದನ್ನು ಇದರಿಂದ ಪತ್ತೆ ಮಾಡಬೇಕೆಂದು ಸರ್ವ ಪ್ರಯತ್ನ ಮಾಡಲಾಗುತ್ತಿದೆ. ಈಗಲೇ ಖಚಿತವಾಗಿ ಇಷ್ಟು ನಷ್ಟ ಎಂದು ಹೇಳಲು ನನ್ನ ಬಳಿ ವಿವರಗಳಿಲ್ಲ.

MR. SPEAKER.—Now held over Question No. 147 of Sri G. T. Govinda Reddy is absent. Hon. Member is absent. Question hour is over.

QUESTIONS FOR ANSWERS ON THE DAY

(but not taken up)

TENANCY CASES UNDER LAND REFORMS ACT IN BELGAUM DISTRICT

308. SRI .P. B. NANDIHALLI (Uchagaon).—

Will the Minister for Revenue be pleased to state :—

(*a*) the number of tenancy cases filed by the landlords Against the tenants under the Land Reforms Act in Belgaum District.

(*b*) whether Government is aware that the landlords are taking advantage of the ignorance and poverty of the tenants and compromising the cases, selling the lands on high rates, not issuing receipts of rent, preparing records of rights by corrupt methods, delaying the cases in the court and thus harassing the tenants.

(*c*) if so, the steps taken to safeguard the rights of the present cultivators and to make the tiller, the owner of the land he tills ?